ಪ್ರಜಾವಾಣಿ

ಒಲಿಂಪಿಕ್ಸ್‌ನಲ್ಲಿ ಈಜುವ ಹೆಬ್ಬಯಕೆ...

ಜೈನ್ ವಿಶ್ವವಿದ್ಯಾಲಯದಲ್ಲಿ ಬಿ.ಕಾಂ ಪದವಿ ಮುಗಿಸಿರುವ ಪ್ರಾರಾ ಈಜುಪಟು ಎಂ. ನಿರಂಜನ್ ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಕೀರ್ತಿ ತಂದ ಸಾರ್ಥಕ ಭಾವ ಹೊಂದಿದ್ದಾರೆ. ಅವರನ್ನು ಬಿ.ಶಿವಕುಮಾರ ಸಂದರ್ಶಿಸಿದ್ದಾರೆ

ಪ್ರಾರಾ ಈಜುಪಟು ಎಂ. ನಿರಂಜನ್ ಹುಟ್ಟಿದಾಗಲೇ 'ಸೈನಸ್ ಬೈಫಿಡಾ' ಎಂಬ ಕಾಯಿಲೆಗೆ ಮತ್ತಾಗಿದ್ದರು. ಇದರಿಂದ ಅವರ ಬೆನ್ನು ಹುರಿಗೆಯ ಊನವಾಗಿದ್ದವು. ಬಹಿಯಲ್ಲೇ ಕುಳಿತಲ್ಲಿ ಹುಣ್ಣು ಕಾಣಿಸಿಕೊಂಡಿತು. ಅಂದಿನಿಂದ ಇಂದಿನವರೆಗೆ 16 ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿದ್ದಾರೆ. ಆದರೆ ಇದ್ದಾವುದೂ ಅವರ ಸಾಧನೆಗೆ ಅಡ್ಡಬಾಗಿಲ್ಲ. ಅವರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ದೇಶಕ್ಕಾಗಿ ಪದಕಗಳನ್ನು ಗೆದ್ದುಕೊಟ್ಟಿದ್ದಾರೆ.

ಬೆಂಗಳೂರಿನ ಜೆ.ಪಿ.ನಗರದ ಆರ್. ಮುಕುಂದನ್ ಮತ್ತು ಲಕ್ಷ್ಮಿ ದಂಪತಿಯ ಮಗನಾಗಿರುವ ನಿರಂಜನ್ ಅವರನ್ನು ಗುಣಪಡಿಸಲು ಪೋಷಕರು ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದರು. ಈ ವೇಳೆ ಸ್ನೇಹಿತರೊಬ್ಬರು ನಿರಂಜನ್ ಅವರಿಗೆ ಖುದುರೆ ಸವಾರಿ ಇಲ್ಲವೇ ಈಜು ಕಲಿಸುವುದು ಸೂಕ್ತ ಎಂದು ಸಲಹೆ ನೀಡಿದ್ದರು. ವೈದ್ಯರ ಸಲಹೆಯಂತೆ ನಿರಂಜನ್ ಪೋಷಕರು ಮಗನನ್ನು ಬಯಸಗರದ ಪಿ.ಎಂ. ಈಜು ಕೇಂದ್ರಕ್ಕೆ ಸೇರಿಸಿದರು. ಇದು ಅವರ ಬದುಕಿಗೆ ಹೊಸ ತಿರುವು ನೀಡಿತು.

ಅಂದಿನಿಂದ ತಂತ್ರ ತಂತ್ರವಾಗಿ ಪ್ರವರ್ಧಮಾನಕ್ಕೆ ಬಂದ ನಿರಂಜನ್ ಬಳ್ಳೆ ತಿಂಗಳ ಎರಡೂವರೆ ವಾರ ಸೆರ್ಬರ್ ಲೆಂಡ್‌ನಲ್ಲಿ ನಡೆದ ಅಂತರರಾಷ್ಟ್ರೀಯ ವೀಲ್‌ಚೇರ್ ಮತ್ತು ಆಂಪುಟಿ ಕ್ರೀಡೆಯಲ್ಲಿ (ಐಡಬ್ಲ್ಯೂಸಿ) ಭಾಗವಹಿಸಿದ 10 ಸ್ಪರ್ಧೆಗಳಲ್ಲೂ ಪದಕ ಗೆದ್ದಿದ್ದಾರೆ. ಅವರ ಜತೆಗೆ **'ಪ್ರಜಾವಾಣಿ'** ನಡೆಸಿದ ಸಂದರ್ಶನ ಇಲ್ಲಿದೆ.

- ನಿಮ್ಮ ಕ್ರೀಡಾ ಬದುಕು ಆರಂಭವಾಗಿದ್ದು ಹೇಗೆ?

2003ರಲ್ಲಿ ಪಿ.ಎಂ. ಈಜು ಕೇಂದ್ರಕ್ಕೆ ಸೇರಿದೆ. ಆಗ ಕೋಚ್ ಜಾನ್ ಕ್ರಿಸ್ಟೋಫರ್ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು.

2004ರಲ್ಲಿ ಮೊದಲ ಬಾರಿ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದೆ. ಮುಂಬೈನಲ್ಲಿ ನಡೆದಿದ್ದ ಚಾಂಪಿಯನ್‌ಷಿಪ್‌ನ 50 ಮೀ. ಬಟರ್‌ಫ್ಲೈನಲ್ಲಿ ಬೆಳ್ಳಿ ಗೆದ್ದೆ. 2005ರಲ್ಲಿ ಕೋಲ್ಕತ್ತದಲ್ಲಿ ನಡೆದಿದ್ದ ಚಾಂಪಿಯನ್‌ಷಿಪ್‌ನಲ್ಲಿ ಎರಡು ರಜತಪದಕ ಬಯಿಸಿದೆ.

2010ರಲ್ಲಿ ಬರ್ಮಿಂಘಮ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿಗೆ ಭಾರತವನ್ನು ಪ್ರತಿನಿಧಿಸುವ ಅವಕಾಶ ಸಿಕ್ಕಿತ್ತು. ಆಗ ಸರೀಕ ಸ್ಪಾಸ ಪಡೆಯಲಷ್ಟೇ ಸಶ್ಯವಾಗಿದ್ದೆ. ನಂತರ ಕಠಿಣ ಅಭ್ಯಾಸ ನಡೆಸಿ ಹಲವು ಕ್ರೀಡಾಕೂಟಗಳಲ್ಲಿ ಪದಕ ಗೆದ್ದಿದೆನೆ.

- ಈ ಪಾರ್ಸ್ ಐಡಾಸ್ ವಿಶ್ವ ಕ್ರೀಡಾಕೂಟದಲ್ಲಿ ಮೂಡಿದ ಸಾಧನೆ ಬಗ್ಗೆ ಹೇಳಿ?

ಖಂಡಿತವಾಗಿಯೂ ಖುಷಿಯಾಗುತ್ತಿದೆ. ಈ ಸಾಧನೆ ಮಾಡಿದ ಭಾರತದ ಮೊದಲ ಪ್ಯಾರಾ ಕ್ರೀಡಾಪಟು ಎಂಬುದು ತಿಳಿದಾಗ ತುಂಬಾ ಹೆಮ್ಮೆ ಎನಿಸಿತು.

ಜೂನಿಯರ್ ವಿಭಾಗದಲ್ಲಿ ಪಾಲ್ಗೊಳ್ಳುತ್ತಿರುವ ಕೊನೆಯ ಚಾಂಪಿಯನ್‌ಷಿಪ್ ಇದಾಗಿತ್ತು. ನನ್ನ ಕೋಚ್ ಕ್ರಿಸ್ಟೋಫರ್ ಇದು ನಿಮಗೆ ಕೊನೆಯ ಅವಕಾಶ. ಈ ಬಾರಿ ನಿಮ್ಮಿಂದ ಮೂಡಿಬರುವ ಸಾಧನೆ ಇತೀ ರಾಷ್ಟ್ರವೇ ಹೆಮ್ಮೆ ಪಡುವಂತಿರಬೇಕು. ಎಂದು ಧೈರ್ಯ ತುಂಬಿದ್ದರು. ಅವರ ಆ ಮಾತುಗಳು ನನಗೆ ಸ್ಫೂರ್ತಿಯಾದವು.

- ಮುಂದಿನ ಗುರಿ ಏನು ?

2016ರ ಪ್ಯಾರಾ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವುದು ನನ್ನ ಮುಖ್ಯ ಗುರಿ. 2012ರ ಪ್ಯಾರಾ ಒಲಿಂಪಿಕ್ಸ್ ವೇಳೆ ನನ್ನ ಚಿಕಿತ್ಸೆಗೆ ಒಳಗಾಗಿದ್ದೆ. ಹೀಗಾಗಿ ಭಾಗವಹಿಸುವ ಅವಕಾಶ ಕೈತಪ್ಪಿತ್ತು. ಆದರೆ ಈ ಬಾರಿ ಅರ್ಹತೆ ಗಳಿಸಲೇಬೇಕೆಂದು ಪಣ ತೊಟ್ಟಿದ್ದೇನೆ.

ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಚೀನಾ ಓಪನ್ ಚಾಂಪಿಯನ್‌ಷಿಪ್ ನಡೆಯಲಿದೆ. ಇದು ಒಲಿಂಪಿಕ್ಸ್ ಅರ್ಹತೆಗೆ ನೇರಪಿಯಾಗುವುದು ಅಲ್ಲಿ ಪದಕ ಗೆಲ್ಲಬೇಕು.

- ನಿಮ್ಮ ಅಭ್ಯಾಸ ಕ್ರಮ ಹೇಗಿರುತ್ತೆ ?

ಪ್ರತಿದಿನ್ನೂ ಕ್ರೀಡಾಪಟುವಿಗೂ ಫಿಟ್‌ನೆಸ್ ಬಹಳ ಅಗತ್ಯ. ಹೀಗಾಗಿ ಮುಂಜಾನೆ 5.30ರಿಂದ 8.30ರವರೆಗೆ ಈಜು ಅಭ್ಯಾಸ ನಡೆಯುತ್ತೆನೆ. ಬಳಿಕ 9 ಗಂಟೆಯಿಂದ 11 ಗಂಟೆಯವರೆಗೆ ಜೆ.ಪಿ ನಗರದಲ್ಲಿರುವ 'ಪಿ ಫಿಟ್' ಜಿಮ್‌ನಲ್ಲಿ ಕಸರತ್ತು ನಡೆಸುತ್ತೆನೆ. ನಂತರ ಮನೆಗೆ ಬಂದು ವಿಶ್ರಾಂತಿ ಪಡೆಯುತ್ತೆನೆ. ಮತ್ತೆ ಸಂಜೆ 4.30ರಿಂದ 8ರವರೆಗೆ ಈಜು ಅಭ್ಯಾಸ ಮುಂದುವರಿಯುತ್ತದೆ.

ದೇಹದ ಹೆಚ್ಚು ದಣಿದಿದೆ ಎಂದೆನಿಸಿದರೆ ಒಂದು ಅಥವಾ ಎರಡು ದಾರಿಕೊಟ್ಟು ಫಿಸಿಯೋಥೆರಪಿ ಮಾಡಿಸಿಕೊಳ್ಳುತ್ತೆನೆ. ಇದರಿಂದ ನೋವೆಲ್ಲಾ ಮಾಯವಾಗಿ ಮನಸ್ಸು ಉಲ್ಲಾಸವಾಗುತ್ತದೆ.

- ಕುಟುಂಬದ ಬೆಂಬಲ ಮತ್ತು ಸಹಕಾರ ಹೇಗಿದೆ?

ಆರಂಭದಲ್ಲಿ ನನ್ನ ತಂದೆ ತಾಯಿ ತುಂಬಾ ಭಯಪಟ್ಟಿದ್ದರು. ಪ್ರಮೇಹ ಸಾಯಿ ಪದಕಗಳನ್ನು ಗೆದ್ದು ತುದಾಗ ಹೆಚ್ಚು ಖುಷಿ ಪಡುತ್ತಿದ್ದರು. ಅಂದಿನಿಂದ ಇಂದಿನವರೆಗೂ ಎಲ್ಲಾ ವಿಷಯದಲ್ಲೂ ಬೆಂಬಲವಾಗಿ ನಿಂತಿದ್ದಾರೆ.

ನನ್ನ ಆಟ್ಟದ ಸಹಕಾರವನ್ನಂತೂ ಸಾಸು ಎಂದಿಗೂ ಮರೆಯಲಾರೆ. ಈಜು ಕಲಿಯಲು ಸೇರಿದ ದಿನಗಳಲ್ಲಿ ಅವರೇ ನನ್ನ ಆರೈಕೆ ನೋಡಿಕೊಳ್ಳುತ್ತಿದ್ದರು. ತರಬೇತಿ ಮುಗಿಯುವವರೆಗೂ ಇದ್ದು ನನ್ನನ್ನು ಮರಳಿ ಮನೆಗೆ ಕರೆದುಕೊಂಡು ಹೋಗುತ್ತಿದ್ದರು.

ಐಡಾಸ್ ಕ್ರೀಡಾಕೂಟದಲ್ಲಿ 10 ಪದಕಗಳನ್ನು ಗೆದ್ದಾಗ ನನಗೆ ಮೊದಲು ಕರೆ ಮಾಡಿ ಅಭಿನಂದಿಸಿದ್ದು ಅವರೇ. ಆಗ ನನ್ನ ಕಣ್ಣಾಗಳು ತುಂಬಿಕೊಂಡಿದ್ದವು.

- ಪ್ರವಾಸದ ಖರ್ಚು ವೆಚ್ಚಗಳನ್ನು ಹೇಗೆ ಭರಿಸುತ್ತೀರಿ?

ಆರಂಭದಲ್ಲಿ ನನ್ನ ತಂದೆಯೇ ಎಲ್ಲವನ್ನೂ ನೋಡಿಕೊಂಡು ಬೆಂಬಲವಾಗಿ ನಿಂತಿದ್ದರು. ನನ್ನ ಸಾಧನೆಯನ್ನು ಗುರುತಿಸಿ ಹಿರಿಯ ಎರಡು ಮಹಾಗಳಿಂದ ಗೋಲ್ ಸ್ಕೋರ್ಸ್ ಫೌಂಡೇಷನ್ ಸಹಕಾರ ನೀಡುತ್ತಿದೆ. ಇದರ ಜತೆಗೆ ರಾಜ್ಯ ಸರ್ಕಾರವೂ ಪದಕ ಗೆದ್ದಾಗ ಹಣಕಾಸಿನ ನೆರವು ನೀಡಿ ಪ್ರೋತ್ಸಾಹಿಸಿದೆ.

- ನಿಮ್ಮ ಪ್ರಕಾರ ಯಾವ ರಾಷ್ಟ್ರದ ಸ್ಪರ್ಧಿಗಳು ಬಲಿಷ್ಠರಾಗಿದ್ದಾರೆ?

ಏಷ್ಯಾ ಖಂಡದಲ್ಲಿ ಚೀನಾ ಮತ್ತು ದಕ್ಷಿಣ ಕೊರಿಯಾ ರಾಷ್ಟ್ರಗಳ ಸ್ಪರ್ಧಿಗಳು ತುಂಬಾ ಬಲಿಷ್ಠರಾಗಿದ್ದಾರೆ. ಇದನ್ನು ಹೊರತುಪಡಿಸಿದರೆ ಆಸ್ಟ್ರೇಲಿಯ, ರಷ್ಯಾ ಮತ್ತು ಆಸ್ಟ್ರೇಲಿಯಾದ ಕ್ರೀಡಾಪಟುಗಳಿಂದ ಸಮಗ ಕಠಿಣ ಸವಾಲು ಎದುರಾಗುತ್ತದೆ. ಮೂಲಭೂತ ಸೌಕರ್ಯಗಳ ವಿಷಯಕ್ಕೆ ಬಂದರೆ ಅವರು ಸಮಗಿಂತ ಸಾಕಷ್ಟು ಮುಂದಿದ್ದಾರೆ.

- ಪ್ಯಾರಾ ಕ್ರೀಡಾಪಟುಗಳಿಗೆ ಸರಿಯಾದ ಮನ್ನಣೆ ಸಿಗುತ್ತಿದೆ ಅನಿಸುತ್ತದೆಯೇ ?

ಕ್ರಿಕೆಟ್, ಬ್ಯಾಡ್ಮಿಂಟನ್, ಫುಟ್‌ಬಾಲ್, ಟೆನಿಸ್ ಕ್ರೀಡೆಗಳನ್ನು ಆಡುವ ಆಟಗಾರರಿಗೆ ಹೋಲಿಸಿದರೆ ನಮಗೆ ಸಿಗುತ್ತಿರುವ ಪ್ರಚಾರ ಮತ್ತು ಮನ್ನಣೆ ತುಂಬಾ ಕಡಿಮೆ. ಹೆಚ್ಚು ಜನಕ್ಕೆ ಪ್ಯಾರಾ ಕ್ರೀಡಾಕೂಟದ ಬಗ್ಗೆಯೇ ಮಾಹಿತಿ ಇಲ್ಲ. ಆದರೂ ಈಚೆಗೆ ನಾವು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದಾಗ ನಮ್ಮನ್ನು ಜನ ಗುರುತಿಸಿ ಅಭಿನಂದಿಸಿದ್ದಾರೆ. ಇಂತಹ ಸಂದರ್ಭಗಳಲ್ಲಿ ಬಹಳ ಖುಷಿಯಾಗುತ್ತದೆ. ✧